ಅಸಲು ದಾವೆ ನಂಃ 299/2018

ಡಿ.ಡಬ್ಲ್ಯೂಃ2–ಚೆನ್ನಯ್ಯಾ ಕಲ್ಮಠ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ24–04–2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ– ಶ್ರೀ. ಎಸ್ ಬಿ ಪಿ ವಕೀಲರಿಂದ.**

ವಾದಿ ಮತ್ತು ಪ್ರತಿವಾದಿಗಳ ನಡುವೆ ನಾನು ಮಧ್ಯಸ್ಥಿಕೆ ವಹಿಸಿದ್ದರಿಂದ ನನಗೆ ವಾದಿ ಮತ್ತು ಪ್ರತಿವಾದಿಗಳು ಪರಿಚಯ ಇರುತ್ತಾರೆ. ಶಶಿಕಲಾ ರವರು ಪ್ರತಿವಾದಿಗ ವಿರುದ್ಧ ಪಾಲು ವಿಭಾಗ ಕೇಳಿ ಈ ಹಿಂದೆ ಒಂದು ದಾವೆಯನ್ನು ದಾಖಲು ಮಾಡಿದ್ದರು ಎಂದರೆ ಸರಿ ಅಲ್ಲ. ಸದರಿ ದಾವೆಯಲ್ಲಿ ರಾಜಿ ಡಿಕ್ರಿ ಆಗಿರುತ್ತದೆಂದರೆ ಸರಿ. ಸದರಿ ರಾಜಿ ಪತ್ರವನ್ನು ನಾನು ನೋಡಿರುತ್ತೇನೆ. ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ವಾದಿಯವರ ವಿವಾಹಕ್ಕಾಗಿ 1 ನೇ ಪ್ರತಿವಾದಿಯು ಜವಾಬ್ದಾರಿ ವಹಿಸಿಕೊಂಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ವಾದಿಯ ವಿವಾಹವನ್ನು ಮಾಡಲು 3 ರಿಂದ 4 ಲಕ್ಷ ರೂ.ಗಳು ಖರ್ಚಾಗಿರುತ್ತವೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಸದರಿ ಹಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ವಾದಿಯವರಿಗೆ ಒಂದು ತೊಲೆ ಬಂಗಾರವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ ಅಲ್ಲ. 1 ನೇ ಪ್ರತಿವಾದಿಯವರು ನನ್ನ ಸ್ನೇಹಿತನಾಗಿರುವುದರಿಂದ ವಾದಿಯವರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಈ ಹಿಂದೆ ಮಾಡಿಕೊಂಡಂತಹ ರಾಜಿ ಪತ್ರದಲ್ಲಿರುವ ಮಾಹಿತಿಗಳು ನಗೆ ತಿಳಿದಿರುತ್ತದೆ. ನನ್ನ ಸಾಕ್ಷಿ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

ಸಹಿ/–

(ವಿಜಯಕುಮಾರ ಎನ್)

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.